(ಇ) ಆಗಿಂದಾಗ್ಗೆ ನಿರಂತರ ದಾಳಿಗಳನ್ನು ನಡೆಸುವುದರ ಮೂಲಕ ಮತ್ತು ವಿಲಕ್ಷಣ ದಳಗಳ ಕಾರ್ಯವನ್ನು ಹೆಚ್ಚಿಸುವ ಮೂಲಕ ಅಕ್ರಮಗಳನ್ನು ತಡೆಯಲು ಕ್ರಮ ತೆಗೆದುಕೊಂಡಿದೆ.

ಕರ್ನಾಟಕ ಪೊಲೀಸು ಅಕಾಡೆಮಿಯಲ್ಲಿ ತರಬೇತಿಯ ಕುರಿತು

1801 (2563) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ಪೊಲೀಸು ಅಕಾಡೆಮಿಯಲ್ಲಿ ಈವರೆವಿಗೆ ತರಬೇತಿ ಆಗಿರುವ ಅಧಿಕಾರಿ ನೌಕರರ ಸಂಖ್ಯೆ ಎಷ್ಟು;

(ಆ) ಖಾಸಗಿ ಸೆಕ್ಯುರಿಟಿ ಸಂಸ್ಥೆಗಳು ಹಾಗೂ ಇಂಟಲಿಜೆನ್ಸ್ ಮೂಲ ವ್ಯಕ್ತಿಗಳಿಗೂ ಸಹ ಇಲ್ಲಿ ತರಬೇತಿ ಸೌಲಭ್ಯ ಒದಗಿಸಲಾಗುತ್ತಿದೆಯೆ;

(ಇ) ಹಾಗದರೆ ಈವರೆಗೆ ಈ ರೀತಿಯ ಎಷ್ಟು ಮಂದಿಗೆ ಸಂಸ್ಥೆಗೆ ತರಬೇತಿ ನೀಡಲಾಗಿದೆ;

(ಈ) ಇಲ್ಲವಾದರೆ ಇಂತಹ ಸಂಸ್ಥೆಯ ಸಿಬ್ಬಂದಿಗೂ ಸಹ ತರಬೇತಿ ನೀಡಲು ಇರುವ ತೊಂದರೆಗಳೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗೃಹ ಸಚಿವರು)

(ಅ) ಹಿಂದಿನ ಪಿ ಸಿ ಸಿ, ಮೈಸೂರು ಹಾಗೂ ಈಗಿನ ಕೆ ಪಿ ಎ ಮೈಸೂರಿನಲ್ಲಿ ತರಬೇತಿ ಆಗಿರುವ ಅಧಿಕಾರಿ: ನೌಕರರ ಸಂಖ್ಯೆ:

1. ಬುನಾದಿ ತರಬೇತಿ

ಗೆಜೆಟೆಡ್ ಪ್ರೋಬೇಷನರ್ಸ್	122
ಪಿ ಎಸ್ ಐ	2281
ಡಬ್ಲ್ಯೂ ಪಿ ಸಿ	483
ಒಟ್ಟು	2886

2. ಅಲ್ಪಾವಧಿ ಪುನರ್‌ಚೇತನ ಹಾಗೂ ವೃತ್ತಿಪರ ತರಬೇತಿಗಳು

ಅ) ಐಪಿಎಸ್ ಅಧಿಕಾರಿಗಳು

ಆ) ಐಎಎಸ್ ಅಧಿಕಾರಿಗಳು

ಇ) ಐಎಫ್‌ಎಸ್ ಅಧಿಕಾರಿಗಳು

ಈ) ಮೋಟಾರು ವಾಹನ ಪಿಐ ಗಳು 4232

ಉ) ಆರ್‌ಟಿಒ ಗಳು

ಊ) ಪೊಲೀಸ್ ಇಲಾಖೆಯ ಎಸ್‌ಪಿ ಮತ್ತು ಕೆಳದರ್ಜೆಯ ಅಧಿಕಾರಿಗಳು

ಋ) ಅಬಕಾರಿ ಅಧಿಕಾರಿಗಳು 7118

(ಅ) ಇಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ಇದುವರೆಗೆ ಖಾಸಗಿ ಸಂಸ್ಥೆಗಳಿಂದ ತರಬೇತಿ ಕೊಡಲು ಬೇಡಿಕೆ ಬಂದಿರುವುದಿಲ್ಲ.

ಪೊಲೀಸ್ ಇಲಾಖೆಯಲ್ಲಿ ವಾರದ ರಜೆ ಮತ್ತು ಭತ್ಯೆಯ ಬಗ್ಗೆ

1804 (2566) ಶ್ರೀ ಗುರುಸ್ವಾಮಿ. ಎ.ಎಸ್. (ಚಾಮುಂಡೇಶ್ವರಿ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪೊಲೀಸ್ ಇಲಾಖೆಯಲ್ಲಿ ವಾರದ ರಜೆ ಭತ್ಯೆಯನ್ನು ಯಾವ ಯಾವ ದರ್ಜೆಯ ಅಧಿಕಾರಿಗಳಿಗೆ ನೀಡಲಾಗುತ್ತಿದೆ;

(ಆ) ನೀಡಲಾಗುತ್ತಿರುವ ರಜಾ ಭತ್ಯೆ ಎಷ್ಟು;

(ಇ) ಹಾಲಿ ನೀಡಲಾಗುತ್ತಿರುವ ಸಂಭಾವನೆಯನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಇನ್ನೂ ಹೆಚ್ಚಿಸದಿರುಲು ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗೃಹ ಸಚಿವರು)

(ಅ) ಪೊಲೀಸ್ ಪೇದೆ ಮತ್ತು ಮುಖ್ಯಪೇದೆಗಳಿಗೆ ವಾರದ ರಜಾ ಭತ್ಯೆಯನ್ನು ನೀಡಲಾಗುತ್ತಿದೆ.

(ಆ) ಕರ್ತವ್ಯ ನಿರ್ವಸುವ ಪ್ರತಿ ವಾರದ ರಜಾ ದಿನಕ್ಕೆ ರೂ. 30.00ಗಳ ಭತ್ಯೆ ನೀಡಲಾಗುತ್ತಿದೆ.

(ಇ) ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೈಂದೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳವರ ಕಾಲೋನಿಗಳಿಗೆ ದಾರಿ ದೀಪ.

1805 (2527) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉಡುಪಿ ಜಿಲ್ಲೆಯಲ್ಲಿ ಬೈಂದೂರು ವಿಧಾನ ಸಭಾ ಕ್ಷೇತ್ರಕ್ಕೆ 1998-99 1999-2000ದ ಇಸವಿಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳವರ ಕಾಲೋನಿಗಳಿಗೆ ದಾರಿದೀಪ ಒದಗಿಸಲಾಗಿದೆಯೇ;

(ಆ) ಈ ಬಗ್ಗೆ ಒಟ್ಟು ಬಂದಿರುವ ಅರ್ಜಿಗಳೆಷ್ಟು; ಎಷ್ಟು ಉಳಿದಿರುವ ಅರ್ಜಿಗಳೆಷ್ಟು;

(ಇ) ಈ ಅವಶ್ಯಕತೆಗಳನ್ನು ಕೂಡಲೇ ಪೂರೈಸುವ ಬಗ್ಗೆ ಸರ್ಕಾರ ಯಾವ ರೀತಿ ಕಾರ್ಯಕ್ರಮ ಹಮ್ಮಿಕೊಂಡಿದೆ?